ಕೇಂದ್ರಗಳಲ್ಲಿ ಉಪಧ್ಯಾಯರ ಕಾಲೋನಿಗಳನ್ನು ಮಾಡಿ ಉಚಿತ ನಿವೇಶನಗಳನ್ನು ಅಥವಾ ಕನ್‌ಸೆಷನ್ ರೇಟ್‌ನಲ್ಲಿ ನಿವೃತ್ತಿ ಹೊಂದಿದವರಿಗೆ ಒದಗಿಸಿಕೊಡಲು ಸರ್ಕಾರಕ್ಕೆ ಸಾಧ್ಯವಾಗುತ್ತದೆಯೆ ?

ಶ್ರೀ ಕೆ. ಹೆಚ್. ರಂಗನಾಥ್. — ಸೇವೆಯಲ್ಲಿ ಇರತಕ್ಕವರಿಗೆ ಈ ಕೆಲಸ ಮಾಡಲು ಆಗುತ್ತಿಲ್ಲ. ಇನ್ನು ನಿವೃತ್ತಿ ಹೊಂದಿದವರಿಗೆ ಹೇಗೆ ಸಾಧ್ಯ. ಸಂಬಂಧಪಟ್ಟ ಮುನಿಸಿಪಾಲಿಟಿಗಳು ಪಂಚಾಯಿತಿಗಳು ಇದರ ಬಗ್ಗೆ ವಿಚಾರ ಮಾಡಬಹುದು. ಸರ್ಕಾರದಿಂದ ಮಾಡುವುದಕ್ಕೆ ಸಾಧ್ಯವಾಗಲಾರದು.

ಶ್ರೀ ಎಂ. ಮಹದೇವ್. — ಟೌನ್‌ನಲ್ಲಿ ಖಾಸಗಿಯವರು ೪೫ ಎಕರೆ ಎಲಿನಿಯೇಷನ್ ಮಾಡಿಕೊಂಡು ಒಂದು ಎಕರೆಗೆ ೪೦-೫೦ ಸಾವಿರ ರೂಪಾಯಿಗಳ ಲಾಭ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಸರ್ಕಾರದಿಂದ ೩-೪ ಎಕರೆ ವಶಪಡಿಸಿಕೊಂಡು ಇವರಿಗೆ ಕನ್‌ಸೆಷನ್ ರೇಟಿನಲ್ಲಿ ಕೊಡಲು ಕ್ರಮ ಕೈಗೊಳ್ಳುತ್ತದೆಯೆ ?

ಶ್ರೀ ಕೆ. ಹೆಚ್. ರಂಗನಾಥ್. — ಮಾನ್ಯ ಸದಸ್ಯರು ತಮ್ಮ ಪ್ರಭಾವವನ್ನು ಬೀರಬೇಕು. ಖಾಸಗಿಯ ಲೇಔಟನ್ನು ಯಾರು ಮಾಡುತ್ತಾರೆ ಅವರ ಮೇಲೆ ತಮ್ಮ ಪ್ರಭಾವ ಬೀರಬೇಕು. ಪ್ರಭಾವ ಬೀರಿ ಕನ್‌ಸೆಷನ್ ರೇಟ್‌ನಲ್ಲಿ ಇವರಿಗೆ ನಿವೇಶನಗಳನ್ನು ಕೊಡಲು ಪ್ರಯತ್ನ ಮಾಡಬೇಕು.

ಶ್ರೀ ಜೆ. ಸಿ. ಮಧುಸ್ವಾಮಿ. — ಮಾನ್ಯ ಅಧ್ಯಕ್ಷರೇ, ಸುಮಾರು ೧೫ ವರ್ಷಗಳಿಂದ ಶಿಕ್ಷಕರಿಗೆ ಮನೆಗಳನ್ನು ಕಟ್ಟಿ ಅದನ್ನು ಆಕ್ಯುಪೈ ಮಾಡಿಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಹೆಚ್. ರಂಗನಾಥ್. — ಮಾನ್ಯ ಸದಸ್ಯರು ಇದರ ಬಗ್ಗೆ ಪತ್ರ ಬರೆದರೆ ನಾನು ವಿಚಾರ ಮಾಡುತ್ತೇನೆ.

ಶ್ರೀ ಟಿ. ಎ. ಮಂಜುನಾಥ್. — ಕೆಲವು ತಾಲ್ಲೂಕ್‌ಗಳಲ್ಲಿ ಹೌಸಿಂಗ್ ಬೋರ್ಡ್‌ನವರು ಕಟ್ಟಿರತಕ್ಕ ಮನೆಗಳಲ್ಲಿ ಉಪಾಧ್ಯಾಯರುಗಳು ವಾಸಮಾಡುತ್ತಿಲ್ಲ. ಅಲ್ಲಿ ಕಿಟಕಿ ಬಾಗಿಲು ಕಿತ್ತು ಹೋಗಿವೆ. ಸಂಬಂಧಪಟ್ಟವರ ಗಮನಕ್ಕೆ ತಂದರೂ ಇದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಅದು ಜಿಲ್ಲಾ ಪರಿಷತ್ತಿಗೂ, ಮಂಡಲ ಪಂಚಾಯಿತಿಗೂ ಬರುವುದಿಲ್ಲ. ತಾವು ಇದರ ಬಗ್ಗೆ ಕೂಡಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್. — ಇದರ ಬಗ್ಗೆ ಪತ್ರ ಬರೆದರೆ ಕ್ರಮ ತೆಗೆದುಕೊಳ್ಳುತ್ತೇನೆ.

೧೨.೦೦ ಪಿ.ಎಂ.

ಅಧ್ಯಕ್ಷರು. — ಪ್ರಶ್ನೋತ್ತರ ವೇಳೆ ಮುಗಿಯಿತು.

ಶ್ರೀ ಆರ್. ಎನ್. ನಾಯಕ. — ಇನ್ನೂ ಎರಡು ಪ್ರಶ್ನೆಗಳು ಇವೆ, ದಯವಿಟ್ಟು ಅವಕಾಶ ಕೊಡಬೇಕು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿನ ಅರಣ್ಯ ಉತ್ಪನ್ನಗಳು

೬. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ). — ಮಾನ್ಯ ಕೃಷಿ, ತೋಟಗಾರಿಕೆ, ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಅರಣ್ಯ ಉತ್ಪತ್ತಿಗಳನ್ನು ಗುತ್ತಿಗೆ ನೀಡುವಲ್ಲಿ ಅಕ್ರಮ ಅವ್ಯವಹಾರಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಲುಮಡ್ಡಿ ಗುತ್ತಿಗೆಯ ವ್ಯವಹಾರದಲ್ಲಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗೂ ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳು ಏನು ? ಹಾಗಿದ್ದರೆ ಈ ಬಗ್ಗೆ ಸರ್ಕಾರದ ನಿಲುವು ಏನು ?

ಶ್ರೀ ಕೆ. ಎಚ್. ರಂಗನಾಥ್ (ಕೃಷಿ, ತೋಟಗಾರಿಕೆ, ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು).—

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಯಾವುದೇ ಅಕ್ರಮ ವ್ಯವಹಾರಗಳು ನಡೆದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದರೆ ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಒಂದು ರಿಟ್ ಅರ್ಜಿ ಸಂಖ್ಯೆ ೧೯೩೨:೯೦ ದಾಖಲಾಗಿದೆ.

ಆ) ಕುಂದಾಪುರ ವಿಭಾಗದ ಬೈಂದೂರು ಕುಂದಾಪುರ ಹಾಗೂ ಶಂಕರನಾರಾಯಣ ವಲಯಗಳಲ್ಲಿ ಹಾಲುಮಡ್ಡಿ ಸಂಗ್ರಹಣೆ ಗುತ್ತಿಗೆಯನ್ನು ದಕ್ಷಿಣ ಕನ್ನಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅರಣ್ಯ ಕೆಲಸಗಾರರ ಉತ್ಪನ್ನ ಮತ್ತು ಮಾರಾಟ ಸಹಕಾರ ಸಂಘಕ್ಕೆ ಕೊಟ್ಟಿರುವ ವಿರುದ್ಧ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ ೧೯೩೨:೯೦ ದಾಖಲು ಮಾಡಿ, ಆ ರಿಟ್ ಅರ್ಜಿಯಲ್ಲಿ ಕೆಲವೇ ಖಾಸಗಿ ವ್ಯಕ್ತಿಗಳು ದುರ್ಲಾಭ ಪಡೆಯುತ್ತಿದ್ದಾರೆಂದು ಅಪಾದಿಸಲಾಗಿದೆ. ಈ ಪ್ರಕರಣ ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದಿರುವುದರಿಂದ ನ್ಯಾಯಾತೀತವಾಗಿದೆ.

ಬೆಂಗಳೂರು ನಗರದಲ್ಲಿರುವ ಕರ್ನಾಟಕ ವಿಜ್ಞಾನಿಗಳಿಗೆ ಅಭಿವೃದ್ಧಿ ನಿಗಮದ ಮಾರಾಟ ಮಳಿಗೆಗಳು

೮. **ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).**—**ಮಾನ್ಯ ವಿಜ್ಞಾನಿಗಳಿಕೆ, ಬಂದರು ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು).**—ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ವಿಜ್ಞಾನಿಗಳಿಕೆ ಅಭಿವೃದ್ಧಿ ನಿಗಮದ ಮಾರಾಟ ಮಳಿಗೆಗಳ ಸ್ಥಳಗಳು (ಬೆಂಗಳೂರಿನಲ್ಲಿ) ಎಲ್ಲೆವೆ ?

ಆ) ಈ ಮಾರಾಟ ಮಳಿಗೆಗಳು ಲಾಭದಾಯಕ ಅಥವಾ ನಷ್ಟದಾಯಕವಾಗಿ ವೆಯೇ ?

ಇ) ಹಾಗಿದ್ದಲ್ಲಿ ಈ ಮಳಿಗೆಗಳನ್ನು ಲಾಭದಾಯಕವನ್ನಾಗಿ ಮಾಡಲು ತೆಗೆದುಕೊಂಡ ಕ್ರಮಗಳೇನು ?

ಈ) ಬೆಂಗಳೂರು ನಗರದಲ್ಲಿ ಇಂತಹ ಮಾರಾಟ ಮಳಿಗೆಗಳನ್ನು ಇನ್ನು ಕೆಲವು ಸ್ಥಳಗಳಲ್ಲಿ ಸ್ಥಾಪಿಸುವ ಪ್ರಸ್ತಾವನೆಗಳು ಇವೆಯೇ ?

ಉ) ಹಾಗಿದ್ದಲ್ಲಿ ಸ್ಥಾಪಿಸಲಿರುವ ಸ್ಥಳಗಳು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಮಾನ್ಯ ವಿಜ್ಞಾನಿಗಳಿಕೆ, ಬಂದರು, ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) I ಶೈತೀಕರಿಸಿದ ವಿಜ್ಞಾನಿ ಮಾರಾಟ ಘಟಕಗಳು :

೧ ಕಬ್ಬನ್ ಪಾರ್ಕ್, ಕೆ. ಆರ್. ಸರ್ಕಲ್ ಬಳಿ
೨ ಸಿಟಿ ಮಾರ್ಕೆಟ್
೩ ರಾಜಾಜಿನಗರ (ನವರಂಗ್ ಚಿತ್ರಮಂದಿರದ ಬಳಿ)
೪ ಮಲ್ಲೇಶ್ವರಂ ಮಾರ್ಕೆಟ್
೫ ರಸೆಲ್ ಮಾರ್ಕೆಟ್
೬ ಯಶವಂತಪುರ ಮಳಿಗೆ ಸಂಕೀರ್ಣ
೭ ಇಂದಿರಾನಗರ ಮಳಿಗೆ ಸಂಕೀರ್ಣ
೮ ಜಯನಗರ ಮಳಿಗೆ ಸಂಕೀರ್ಣ
೯ ಜೆ. ಪಿ. ನಗರ ಮಳಿಗೆ ಸಂಕೀರ್ಣ
೧೦ ಜಾನ್‌ಸನ್ ಮಾರ್ಕೆಟ್
೧೧ ಐ. ಎ. ಎಫ್, ಕ್ಯಾಂಪಸ್, ಹೆಬ್ಬಾಳ

II. ವಿಜ್ಞಾನಿ ಉಪಹಾರ ಗೃಹಗಳು

೧ ಕಬ್ಬನ್ ಪಾರ್ಕ್ (ಕೆ. ಆರ್. ಸರ್ಕಲ್ ಬಳಿ)
೨ ಕಬ್ಬನ್ ಪಾರ್ಕ್ ವಿಜ್ಞಾನಿಲಯ
೩ ಇಂದಿರಾನಗರ ಮಳಿಗೆ ಸಂಕೀರ್ಣ
೪ ಸಂಚಾರಿ ಉಪಹಾರ ಗೃಹ